

ಡಾ.ವಿನೋದ ಛೆಬ್ಬಿ

**ನಾವೆಲ್ಲ ನೆನಪು, ಕಲ್ಪನೆ ಮಾಡಿಕೊಳ್ಳುವಾಗಲೆಲ್ಲ ಸಂಮೋಹಿನಿಗೆ (hypnosis) ಒಳಗಾಗುತ್ತ ಇರುತ್ತೇವೆ!**

# 93: ಅಂತರಾಳದ ಉತ್ಖನನ

ಲೋಚನ್ ಲೂಸಿಯ ದಾಂಪತ್ಯ ಚಿಕಿತ್ಸೆ ನಡೆಯುತ್ತಿದೆ. ಲೋಚನನೊಡನೆ ಹೊಂದಾಣಿಕೆ ಅಸಾಧ್ಯವೆಂದು ಅನ್ನಿಸಿದ್ದರೂ ಲೂಸಿ ಮದುವೆಯಾಗಿದ್ದಾಳೆ. ಇದರ ಕಾರಣವು ಆಕೆಯ ಸುಪ್ತಮನಸ್ಸಿನಲ್ಲಿ ಅಡಗಿದ್ದು, ಅದನ್ನು ಕಂಡುಹಿಡಿಯಬೇಕಾಗಿದೆ.

ಸುಪ್ತಮನಸ್ಸಿನಲ್ಲಿ ಅಡಗಿರುವುದನ್ನು ಕಂಡುಹಿಡಿಯಲು ಹಲವಾರು ಕೌಶಲ್ಯಗಳಿವೆ. ಮೊದಲು ನೆನಪಿಗೆ ಬರುವುದು ಸಂಮೋಹಿನಿ (**hypnosis**). ನಾಟಕೀಯ ಪ್ರದರ್ಶನದ ಮೂಲಕ ಅತಿರಂಜನೆಗೊಳಗಾಗಿ ವೈಭವೀಕರಿಸಲ್ಪಟ್ಟ ಈ ಕೌಶಲ್ಯದ ಬಗೆಗಿನ ಸರಳ ವಾಸ್ತವತೆ ಅನೇಕರಿಗೆ ಗೊತ್ತಿಲ್ಲ. ಉದಾಹರಣೆಗೆ, ಸಂಮೋಹಿನಿಗೆ ಕಣ್ಣುಮುಚ್ಚುವುದು ಬೇಕಾಗಿಲ್ಲ; ಆಗಾಗ ನಮ್ಮನ್ನೇ ನಾವು ಸಂಮೋಹಿನಿಗೆ ಒಳಪಡಿಸಿಕೊಳ್ಳುತ್ತ ಇರುತ್ತೇವೆ. (ನಂಬುವುದಿಲ್ಲವೆ? ಅದಕ್ಕೆ ಈ ಪ್ರಯೋಗ ಮಾಡಿ: ಒಬ್ಬರನ್ನು ಎದುರು ಕೂಡಿಸಿಕೊಂಡು ಅವರಿಗೆ ನಿಮ್ಮತ್ತಲೇ ನೋಡುವಂತೆ ಹೇಳಿ, ಹೀಗೆ ಕೇಳಿ: 'ನಿಮಗೆಷ್ಟು ಬಟ್ಟೆಬರೆಗಳಿವೆ? ಅವುಗಳನ್ನು ಯಾವ ಕ್ರಮದಲ್ಲಿ ಜೋಡಿಸಿಟ್ಟಿದ್ದೀರಿ? ಅದರಲ್ಲಿ ಹೊಸದು ಎಲ್ಲೆಲ್ಲಿವೆ? ಯಾವ್ಯಾವ ಬಣ್ಣದ್ದು?...' ತಕ್ಷಣ ಅವರು ನಿಮ್ಮನ್ನು ನೋಡುವುದನ್ನು ಬಿಟ್ಟು ಕಣ್ಣುಗುಡ್ಡೆಗಳನ್ನು ಎಲ್ಲೆಲ್ಲೋ ತಿರುಗಿಸುತ್ತಾರೆ. ಯಾಕೆ? ಆ ಕ್ಷಣಗಳಲ್ಲಿ ಅವರು ನಿಮ್ಮೆದುರಿನಿಂದ ಮಾಯವಾಗಿ, ತಮ್ಮ ಬಟ್ಟೆ ಕಪಾಟಿನೆದುರು ನಿಂತಿರುತ್ತಾರೆ – ಅಂದರೆ ಸಂಮೋಹಿನಿಗೆ ಒಳಗಾಗಿದ್ದಾರೆ!)

ನಮ್ಮೆಲ್ಲರ ನಿತ್ಯವರ್ತನೆಗಳ ಹಿಂದೆ ಸುಪ್ತಮನಸ್ಸಿನ ಕೈವಾಡವಿದೆ. ಉದಾಹರಣೆಗೆ, ಬಾಯಿತಪ್ಪಿ ಹೊರಬರುವ ಯಾವುದೋ ಮಾತು, ಉದ್ದೇಶವಿಲ್ಲದೆ 'ಸುಮ್ಮನೆ' ತೋರುವ ವರ್ತನೆ, ಮಾತಿನ ಹರಿವಿಗೆ ಸಂಬಂಧಪಡದ ಭಾವನೆಗಳ ತೋರ್ಪಡಿಕೆ ಹಾಗೂ ಹೊಂದಿಕೊಳ್ಳದ ದೇಹಭಾಷೆ (ಉದಾ. ಕೆಲವು ರಾಜಕಾರಣಿಗಳು ಆಶ್ವಾಸನೆ ನೀಡುವಾಗ ಎಲ್ಲೋ ನೋಡುತ್ತಿರುವುದನ್ನು ನೋಡಿರಬೇಕಲ್ಲ?), ಶರೀರದ ವಿಲಕ್ಷಣ ಭಂಗಿ, ವೈದ್ಯರ ಪ್ರಕಾರ ಕಾಯಿಲೆ ಇಲ್ಲದಿದ್ದರೂ ಅನುಭವಿಸುವ ಕಿರಿಕಿರಿ – ಇಂಥದ್ದರ ಮೂಲಕ ಒಳಗೆ ಅಡಗಿರುವುದು ಅರಿವಿಲ್ಲದೆ ಹೊರಕಾಣುತ್ತಲೇ ಇರುತ್ತದೆ. ಇದನ್ನು ಚಿಕಿತ್ಸೆಗೆ ಉಪಯೋಗಿಸಬಹುದು. ಆದರೆ ಲೂಸಿಯ ಪ್ರಕರಣದಲ್ಲಿ ವಾಸ್ತವ ಹೊರಬಂದರೆ ಒಪ್ಪಿಕೊಳ್ಳಲು ಆಕೆಯ ಹೊರಮನಸ್ಸು ತಯಾರಿಲ್ಲ. ಹಾಗಾಗಿ ಪ್ರತಿರೋಧ ಬರುತ್ತಿದೆ. ಈ ಪ್ರತಿರೋಧವನ್ನು ಅತಿಕ್ರಮಿಸಲು ಸರಿಹೊಂದುವ ವಿಧಾನವೊಂದನ್ನು ಯೋಜಿಸಿದೆ.

ಲೂಸಿ, ಉತ್ತರ ಕಂಡುಹಿಡಿಯಲು ನಾನು ಸಹಾಯ ಮಾಡಲಾ? (ತಲೆ ಅಲ್ಲಾಡಿಸಿದಳು.) ಸರಿ. ಯಾಕೆ ಮಾಡಿದೆ ಎಂದು ನಿಮ್ಮನ್ನೇ ಪ್ರಶ್ನಿಸಿಕೊಳ್ಳುವುದನ್ನು ಸ್ವಲ್ಪ ನಿಲ್ಲಿಸಿ. ಹೀಗೆ ಯೋಚಿಸಿ: 'ನಾನು ಇದನ್ನು ಆರಿಸಿಕೊಂಡಿದ್ದು ಸರಿಯಾಗಿದೆ, ಹಾಗೂ ಹೀಗೆ ಮಾಡುವುದು ನನಗೆ ಬೇಕಾಗಿತ್ತು, ಹಾಗೂ ಇದು ನನ್ನ ಆಯ್ಕೆ, ಹಾಗೂ ಇದಕ್ಕೆ ಪ್ರಬಲ ಕಾರಣ ಇದೆ. ಅದೇನೆಂದರೆ' ಎಂದು ತೇಲಿಸಿದೆ. ಇಲ್ಲಿ 'ಹಾಗೂ' ಎನ್ನುವುದನ್ನು ಪುನರುಚ್ಚರಿಸಿದೆ. ಯಾಕೆ? ವಾಕ್ಯಪುಂಜವು ಸರಳವಾಗಿ ಹರಿಯುತ್ತ ನಮ್ಮನ್ನೇ ನಾವು ನಂಬುವುದು ಸುಲಭವಾಗುತ್ತದೆ.

'ಹೌದು, (ತನ್ನಷ್ಟಕ್ಕೆ ತಾನಾಗಿ) ಲೋಚನನನ್ನು ನಾನೇ ಆರಿಸಿಕೊಂಡೆ. ಇದು ನನ್ನದೇ ಆಯ್ಕೆ... ಅದು ಹೇಗೆಂದರೆ...' ಲೂಸಿ ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುವಾಗ ಆಕೆಗೆ ಪದಗಳನ್ನು ಉಣಿಸಿದೆ. 'ನನಗೆ ಅನುಕಂಪ ಇತ್ತು. ಅವನು ನಾನಿಲ್ಲದೆ ಒಂಟಿಯಾಗುತ್ತಾನೆ. ಹಾಗಾಗಿ...' ಎಂದು ಮಾತು ಎಳೆದುಬಿಟ್ಟು ಯೋಚಿಸಲು ಆಸ್ಪದಕೊಟ್ಟೆ.

'ಅನುಕಂಪ ಇರಬೇಕು... ಹಾಗಂತ ಅಯ್ಯೋ ಪಾಪ ಅಂತ ಮದುವೆಯಾಗಲಿಕ್ಕೆ ಆಗುತ್ತಾ?' ತನ್ನ ಪ್ರಶ್ನೆಗೆ ತಾನೇ ಉತ್ತರಿಸಿದಳು.

'ನಾನಿಲ್ಲದೆ ಲೋಚನ್ ಬದುಕಲು ಸಾಧ್ಯವಿಲ್ಲ, ಹಾಗಾಗಿ...' ಎಂದೆ.

ಆಕೆ, '...ಹಾಗಿದ್ದರೆ ಮದುವೆ ಅಂತ ಆಗಬಹುದೇ ಹೊರತು ದಾಂಪತ್ಯ ನಡೆಸಲಿಕ್ಕಾಗುವುದಿಲ್ಲ.' ಎಂದಳು.

'ನಾನು ಅವನಿಗೆ ಸುಖ ಕೊಡಬೇಕು. ಅದಕ್ಕೇ...' ಎಂದೆ.

'... ಕೆಲವೊಮ್ಮೆ ಹಾಗೆಯೂ ಯೋಚಿಸಿದ್ದಿದೆ. ನನ್ನನ್ನ ಮದುವೆಯಾದರೆ ಲೋಚನ್‌ಗೆ ಸುಖ ಸಿಗುವುದಾದರೆ ನಾನೇಕೆ ಅವನಿಗೆ ಸುಖ ಕೊಡಬಾರದು ಅಂದುಕೊಂಡಿದ್ದೇನೆ.' ಸುಪ್ತಮನಸ್ಸಿನ ತುದಿ ಇಣುಕುತ್ತಿದೆ. ಹೊರಗೆಳೆಯಬೇಕು.

'...ನಾನು ಕೊಡುವ ಸಾಂಗತ್ಯ ಸುಖಕ್ಕೆ ಲೋಚನ್ ಅರ್ಹ ವ್ಯಕ್ತಿಯಾಗಿದ್ದಾನೆ...'

ತಕ್ಷಣ ಲೂಸಿಯ ಮುಖಭಾವ ಬದಲಾಯಿತು. ಅಂತರ್ಮುಖಿಯಾಗುತ್ತ ಕಣ್ಣು ಮುಚ್ಚಿಕೊಂಡಳು. ಅದಕ್ಕೇ ಕಾದಿದ್ದವನು ಮಾತು ಉಣಿಸುವುದನ್ನು ಹೆಚ್ಚಿಸಿದೆ. 'ಲೋಚನನಿಗೆ ಸಂಗಾತಿಯ, ಸುಖದ ಅಗತ್ಯ ಇದೆ ಅದನ್ನು ಪಡೆಯಲು ಅವನಿಗೆ ಅರ್ಹತೆಯಿದೆಯೋ ಗೊತ್ತಿಲ್ಲ. ಆದರೂ ಕೊಡುತ್ತೇನೆ...ಆದರೂ ಕೊಡುತ್ತೇನೆ...' ಎಂದು ಸುಮ್ಮನಾಗಿ ಅವಳನ್ನೇ ದಿಟ್ಟಿಸಿದೆ.

ಲೂಸಿ ಯೋಚಿಸುತ್ತಿದ್ದವಳು ಒಮ್ಮಿಂದೊಮ್ಮೆಲೇ ತೀವ್ರ ಅಸಮಾಧಾನ ಪ್ರಕಟಿಸುತ್ತ ಕಣ್ಣು ತೆರೆದಳು.

'ಅರ್ಹತೆಯನ್ನು ನೋಡದೆ ಪ್ರೀತಿಯನ್ನು ಕೊಟ್ಟುಬಿಟ್ಟೆ! ಅವನಿಗೆ ಕಾಪಾಡಿಕೊಳ್ಳಲು ಆಗುತ್ತಿಲ್ಲ!' ಸ್ವರದಲ್ಲಿ ಕಠಿಣತೆಯಿತ್ತು.

'ಕೊಡಲು ಶುರುಮಾಡಿದ ನಂತರ ಅರ್ಹತೆಯಿಲ್ಲ ಎಂದು ಗೊತ್ತಾದಾಗ ಏನು ಅನ್ನಿಸಿರಬಹುದು?' ಎಂದು ಆಕೆಗೆ ಕೇಳುವಂತೆ ನನ್ನಷ್ಟಕ್ಕೆ ಮಾತಾಡಿಕೊಂಡೆ.

ಇಷ್ಟುಹೊತ್ತು ಸುಮ್ಮನಿದ್ದ ಲೋಚನ್ ಥಟ್ಟನೆ ಮಾತಾಡಿದ. 'ನನಗೆ ಗೊತ್ತು ಹೇಗೆ ಅನ್ನಿಸುತ್ತದೆ ಅಂತ. ನಾನು ಚಿಕ್ಕವನಿರುವಾಗ ಅಪ್ಪನ ಹತ್ತಿರ ಮೊಬೈಲ್ ಕೇಳಿದ್ದೆ. ನಿನಗೆ ಉಪಯೋಗಿಸಲಿಕ್ಕೆ ಬರೋಲ್ಲ ಎಂದು ಕೊಡಿಸಲಿಲ್ಲ. ಆಗ ಚಿಕ್ಕಪ್ಪ ಮೊಬೈಲ್ ತಂದುಕೊಟ್ಟಿದ್ದರು. ಹೊಸದು. ಅಪ್ಪ ಅದನ್ನು ಕಿತ್ತುಕೊಂಡರು. ಹಟಮಾಡಿದರೂ ಕೇಳಲಿಲ್ಲ. ಅವರು ಜೊತೆಯಲ್ಲಿ ಇರುವಾಗ ಮಾತ್ರ ನನ್ನ ಕೈಗೆ ಕೊಡುತ್ತಿದ್ದರು. ಬೀಳಿಸೀಯಾ, ಹಾಗಲ್ಲ ಹಿಡಿಯೋದು ಎಂದೆಲ್ಲ ಹೇಳಿ ಕಂಟ್ರೋಲ್ ಮಾಡುತ್ತಿದ್ದರು. ನನಗೆ ಗಲಿಬಿಲಿಯಾಗುತ್ತಿತ್ತು. ಒಂದುದಿನ ಬೀಳಿಸಿಬಿಟ್ಟೆ. ಗ್ಲಾಸ್ ಒಡೆದುಹೋಯಿತು. ನಾನು ಹೇಳಿರಲಿಲ್ವ? ಅಯೋಗ್ಯ! ಇವನಿಗೆ ಮೊಬೈಲ್ ಒಂದು ಕೇಡು ಎಂದು ಹೊಡೆದರು. ಇತ್ತೀಚಿನ ತನಕವೂ ಆ ವಿಷಯ ಎತ್ತಿ ಬಯ್ಯುತ್ತಿದ್ದರು.' ಅವನು ನೊಂದ ಮಗುವಾಗಿದ್ದ.

ಲೋಚನನ ಬಗೆಗೆ ಅನುಕಂಪ ಉಕ್ಕಿತು. 'ಛೆ, ನಿಮಗೆ ಎಷ್ಟೊಂದು ನಿರಾಸೆ ಆಗಿರಬೇಕಲ್ಲ!' ಎಂದಂದು ಲೂಸಿಯ ಕಡೆಗೆ ತಿರುಗಿ ಕಾಯ್ದೆ.

ಲೂಸಿ ಗಂಭೀರ ಮುಖಭಾವದಿಂದ ಹೇಳಿದಳು: 'ಹೌದು, ಅರ್ಥವಾಯಿತು. ನಾನೇಕೆ ಇವನ ಜೊತೆ ಜಗಳ ಆಡುತ್ತಿದ್ದೇನೆ ಅಂತ.' ಎಂದು ಲೋಚನನ ಪಕ್ಕಕ್ಕೆ ಸರಿದು ಅವನನ್ನು ಅರೆತಬ್ಬಿಹಿಡಿದು ಅಳಲು ಶುರುಮಾಡಿದಳು. 'ಒಂದುಕಡೆ ಪ್ರೀತಿ ಕೊಡುತ್ತಾ, ಇನ್ನೊಂದು ಕಡೆ ಅದಕ್ಕವನು ತಕ್ಕವನಲ್ಲ ಎಂದು ಬೆರಳು ತೋರಿಸುತ್ತಲೂ ಇದ್ದೇನೆ!'

ಲೂಸಿಯ ಮುಖದ ಮೇಲೆ ಒಂದೇ ಒಂದು ಕ್ಷಣ ಆಕ್ರಮಣದ ಕಠಿಣಭಾವ ಕಾಣಿಸಿಕೊಂಡು ಮೈಬಿಗಿಹಿಡಿದು ಲೋಚನನಿಂದ ಬೇರ್ಪಟ್ಟನ್ನು ಗಮನಿಸಿದೆ. ಪಶ್ಚಾತ್ತಾಪದ ಜಾಗದಲ್ಲಿ ಕಾಠಿಣ್ಯ? ಇವಳು ಏನನ್ನು ಮೆಟ್ಟಿನಿಲ್ಲಲು ಹೊರಟಿದ್ದಾಳೆ? ಇದನ್ನು ಮುಂದಿನ ವಾರ ಕಂಡುಹಿಡಿಯಬೇಕು ಎಂದುಕೊಂಡೆ.

ಸೂಚನೆ: ಓದುಗರು ತಮ್ಮ ಸಮಸ್ಯೆಗಳಿಗೆ ಸಲಹೆ ಬಯಸಿದಲ್ಲಿ ಪತ್ರವನ್ನು ಬರೆಯಬಹುದು. ವಿಳಾಸ: ಸುಖೀ ದಾಂಪತ್ಯ ವಿಭಾಗ, ಸುಧಾ ವಾರಪತ್ರಿಕೆ, 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 01